ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

**ಪದವಿ ಪೂರ್ವ ಶಿಕ್ಷಣ ಇಲಾಖಾ ನಿರ್ದೇಶಕರ ನಡವಳಿಗಳು**

ವಿಷಯ: ಶ್ರೀ ಡಿ ವಿ ಚೌಡಕಿ, ರಾಜ್ಯಶಾಸ್ತ್ರ ಉಪನ್ಯಾಸಕರು, ಶ್ರೀ ಯೋಗಿವೇತನ ಪದವಿ ಪೂರ್ವ ಕಾಲೇಜು, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇವರಿಗೆ ಆಡಳಿತ ಮಂಡಳಿಯವರು ಪ್ರಾಚಾರ್ಯರಾಗಿ ಪದೋನ್ನತಿ ನೀಡಿರುವುದನ್ನು ಅನುಮೋದಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಆಇ 10 ಟಿ ಎಫ್ ಪಿ 2005 ದಿನಾಂಕ: 23-07-2005.
2. ಗದಗ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಪ್ರಸ್ತಾವನೆ ಸಂಖ್ಯೆ ಪಪೂಶಿಇ/ಉನಿಕಗ/485/2014-15 ದಿನಾಂಕ:19-11-2014.

*****

**ಪ್ರಸ್ತಾವನೆ:**

ಶ್ರೀ ಯೋಗಿವೇಮನ ಶಿಕ್ಷಣ ಪ್ರಸಾರ ಸಮಿತಿ, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇದರ ವತಿಯಿಂದ ನಡೆಯುತ್ತಿರುವ ಶ್ರೀ ಯೋಗಿವೇತನ ಪದವಿ ಪೂರ್ವ ಕಾಲೇಜು, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಈ ಕಾಲೇಜಿನಲ್ಲಿ ದಿನಾಂಕ:31-05-2014ರಂದು ಶ್ರೀ ಆರ್ ಹೆಚ್ ಬೆಲಹುಣಸಿ, ಪ್ರಾಚಾರ್ಯರು ಇವರ ವಯೋ ನಿವೃತ್ತಿಯಿಂದ ತೆರವಾದ ಪ್ರಾಚಾರ್ಯರ ಹುದ್ದೆಯನ್ನು ಜೇಷ್ಠತೆ ನಿಯಮಗಳನ್ನು ಪಾಲಿಸಿ ಪದೋನ್ನತಿ ಮೂಲಕ ತುಂಬಿಕೊಳ್ಳಲು ಆಡಳಿತ ಮಂಡಳಿಯವರಿಗೆ ದಿನಾಂಕ:30-10-2014ರ ಈ ಕಛೇರಿಯ ಜ್ಞಾಪನ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಜೆಜಿ-097/ಪ್ರಾ.ಬಡ್ತಿ 01/2014-15ರ ಮೂಲಕ ಅನುಮತಿ ನೀಡಲಾಗಿದೆ. ನಿವೃತ್ತಿಯಿಂದ ತೆರವಾದ ಪ್ರಾಚಾರ್ಯರ ಹುದ್ದೆಗೆ ಆಡಳಿತ ಮಂಡಳಿಯು ದಿನಾಂಕ: 05-11-2014ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ಕಾಲೇಜದಲ್ಲಿಯ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ಡಿ ವಿ ಚೌಡಕಿ, ಇವರಿಗೆ ಪ್ರಾಚಾರ್ಯರಾಗಿ ಪದೋನ್ನತಿ ನೀಡಿ ಇಲಾಖಾ ಅನುಮೋದನೆ ಪಡೆಯಲು ತೀರ್ಮಾನಿಸಿರುತ್ತಾರೆ. ಅಧ್ಯಕ್ಷರು, ಶ್ರೀ ಯೋಗಿವೇಮನ ಶಿಕ್ಷಣ ಪ್ರಸಾರ ಸಮಿತಿ, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇವರು ದಿನಾಂಕ05-11-2014ರ ಪದೋನ್ನತಿ ಆದೇಶದಲ್ಲಿ ಶ್ರೀ ಡಿ ವಿ ಚೌಡಕಿ, ರಾಜ್ಯಶಾಸ್ತ್ರ ಉಪನ್ಯಾಸಕರು, ಇವರಿಗೆ ಪ್ರಾಚಾರ್ಯರಾಗಿ ಪದೋನ್ನತಿ ನೀಡಿ ಆದೇಶಿಸಿರುತ್ತಾರೆ. ಶ್ರೀ ಡಿ ವಿ ಚೌಡಕಿ, ಇವರು ದಿನಾಂಕ:05-11-2014ರಂದು ಪ್ರಾಚಾರ್ಯರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿ ಸಂಸ್ಥೆಯ ವತಿಯಿಂದ ಒಂದೇ ಅನುದಾನಿತ ಪದವಿ ಪೂರ್ವ ಕಾಲೇಜು ನಡೆಯುತ್ತಿದ್ದು, ಪ್ರಾಚಾರ್ಯರ ಹುದ್ದೆಯು ಏಕಮಾತ್ರ ಹುದ್ದೆಯಾಗಿರುವುದರಿಂದ ಮೀಸಲಾತಿ ನಿಯಮಗಳು ಅನ್ವಯಿಸುವುದಿಲ್ಲ. ಸದರಿ ಕಾಲೇಜಿನ ಉಪನ್ಯಾಸಕರ ಸೇವಾ ಜೇಷ್ಠತೆಯಲ್ಲಿ ಶ್ರೀ ಡಿ ವಿ ಚೌಡಕಿ, ಇವರೇ ಹಿರಿಯರಾಗಿರುತ್ತಾರೆ. ಈ ಹಿನ್ನಲೆಯಲ್ಲಿ ಉಲ್ಲೇಖ-2 ರಲ್ಲಿರಿಸಿದ ಜಿಲ್ಲಾ ಉಪ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

..2

*ಆದೇಶ ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಜಿಜಿ-097/ಪ್ರಾ.ಬಡ್ತಿ/01/2014-15ದಿನಾಂಕ: 18 -02-2015.*

ಶ್ರೀ ಯೋಗಿವೇಮನ ಶಿಕ್ಷಣ ಪ್ರಸಾರ ಸಮಿತಿ, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇದರ ವತಿಯಿಂದ ನಡೆಯುತ್ತಿರುವ ಶ್ರೀ ಯೋಗಿವೇಮನ ಪದವಿ ಪೂರ್ವ ಕಾಲೇಜು, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಈ ಕಾಲೇಜಿನಲ್ಲಿ ದಿನಾಂಕ:31-05-2014ರಂದು ಶ್ರೀ ಆರ್ ಹೆಚ್ ಬೆಲಹುಣಸಿ, ಪ್ರಾಚಾರ್ಯರು ಇವರ ನಿವೃತ್ತಿಯಿಂದ ತೆರವಾದ ಪ್ರಾಚಾರ್ಯರ ಹುದ್ದೆಗೆ ಆಡಳಿತ ಮಂಡಳಿಯು ಸದರಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ಡಿ ವಿ ಚೌಡಕಿ, ಇವರಿಗೆ ಪ್ರಾಚಾರ್ಯರಾಗಿ ಪದೋನ್ನತಿ ನೀಡಿರುವುದನ್ನು ವೇತನ ಶ್ರೇಣಿ ರೂ.30400-51300ರಲ್ಲಿ ಸದರಿಯವರು ಪ್ರಾಚಾರ್ಯರ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ:05-11-2014ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುದಾನ ಸಹಿತವಾಗಿ ಅನುಮೋದಿಸಿದೆ.

**ಷರತ್ತುಗಳು:**

1) *ಈ ಪದೋನ್ನತಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯವರಾಗಲಿ/ಉಪ ನಿರ್ದೇಶಕರಾಗಲಿ ಅಥವಾ ಪದೋನ್ನತಿ ಹೊಂದಿದ ಪ್ರಾಚಾರ್ಯರಾಗಲಿ ಇಲಾಖೆಗೆ ತಪ್ಪು ಮಾಹಿತಿ ನೀಡಿರುವುದು ಭವಿಷ್ಯದಲ್ಲಿ ಕಂಡುಬಂದಲ್ಲಿ ಯಾವ ಮುನ್ಸೂಚನೆಯನ್ನು ನೀಡದೆ ಈ ಆದೇಶವನ್ನು ರದ್ದುಪಡಿಸುವ ಹಕ್ಕನ್ನು ನಿರ್ದೇಶನಾಲಯವು ಕಾಯ್ದಿರಿಸಿಕೊಂಡಿದೆ.*
2) *ಸದರಿ ಪದೋನ್ನತಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಪ್ರಾಧಿಕಾರದಲ್ಲಾಗಲಿ / ಮಾನ್ಯ ನ್ಯಾಯಾಲಯದಲ್ಲಾಗಲಿ ಯಾವುದೇ ರಿಟ್ ಅರ್ಜಿಗಳು ಇರಕೂಡದು.*
3) *ಪ್ರಾಚಾರ್ಯರಾಗಿ ಪದೋನ್ನತಿ ಹೊಂದಿದ ಶ್ರೀ ಡಿ ವಿ ಚೌಡಕಿ,ರವರೇ ನಿಯಮಾನುಸಾರ ರಾಜ್ಯಶಾಸ್ತ್ರ ವಿಷಯವನ್ನು ಬೋಧಿಸತಕ್ಕದ್ದು.*

ಸಹಿ/-
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ:

ಅಧ್ಯಕ್ಷರು / ಕಾರ್ಯದರ್ಶಿಗಳು, ಶ್ರೀ ಯೋಗಿವೇಮನ ಶಿಕ್ಷಣ ಪ್ರಸಾರ ಸಮಿತಿ, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತಕ್ರಮಕ್ಕಾಗಿ.

**ಪ್ರತಿಯನ್ನು:**

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಗದಗ ಜಿಲ್ಲೆ, ಗದಗ, ಇವರಿಗೆ ಮಾಹಿತಿಗಾಗಿ.
2. ಪ್ರಾಚಾರ್ಯರು, ಶ್ರೀ ಯೋಗಿವೇಮನ ಪದವಿ ಪೂರ್ವ ಕಾಲೇಜು, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಇವರಿಗೆ ಮುಂದಿನ ಕ್ರಮಕ್ಕಾಗಿ
4. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

Kodbole
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ